> ನಾನು ಕೋಚಿಂಗ್ ಸೆಂಟರ್‌ಗಳ ಬೋಧಕರಿಂದ ತರಬೇತಿಗೊಳಗಾದ ಮನಸ್ಸುಗಳನ್ನಲ್ಲ, ಬದಲಿಗೆ ಇನ್ನೂ ಎರಕಗೊಂಡಿರದ, ತಾಜಾ ಬುದ್ಧಿಮತ್ತೆಯನ್ನುಳ್ಳ ವಿದ್ಯಾರ್ಥಿಗಳನ್ನು ಎದುರು ನೋಡುತ್ತಿದ್ದೇನೆ. ಕೇವಲ ಪ್ರಶ್ನೆಪತ್ರಿಕೆಗಳ ವಿನ್ಯಾಸವನ್ನು ಗುರುತಿಸುವ ಕೌಶಲವನ್ನು ಕರಗತ ಮಾಡಿಕೊಳ್ಳುವುದಕ್ಕಷ್ಟೇ ಕೋಚಿಂಗ್ ತರಗತಿಗಳು ವಿದ್ಯಾರ್ಥಿಗಳಿಗೆ ನೆರವಾಗುತ್ತವೆ. ಇದರಿಂದ ತಾಜಾ ಬುದ್ಧಿಮತ್ತೆಯನ್ನುಳ್ಳ ವಿದ್ಯಾರ್ಥಿಗಳು ಸಿಗುವುದಿಲ್ಲ.
>
> **–ಡಾ. ಎಮ್.ಎಸ್.ಅನಂತ್,** ಮಾಜಿ ನಿರ್ದೇಶಕ, ಐಐಟಿ ಮದ್ರಾಸ್

ಅಗ್ರಣಿಗಳಿಗಾಗಿ ಯಶಸ್ಸಿನ ಕಲ್ಪನೆ

ಇತ್ತೀಚೆಗೆ ಹನ್ನೆರಡನೆಯ ತರಗತಿಯ ಪರೀಕ್ಷಾ ಫಲಿತಾಂಶ ಪ್ರಕಟವಾದ ತರುವಾಯದಲ್ಲೇ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ದಾಖಲಾತಿಯನ್ನು ಒದಗಿಸುವ ಸಾಮಾನ್ಯ ಪ್ರವೇಶ ಪರೀಕ್ಷೆ(ಸಿಇಟಿ)ಯ ಫಲಿತಾಂಶವೂ ಬಂದಿತು. ವಿದ್ಯುನ್ಮಾನ ಮಾಧ್ಯಮಗಳು ಹಾಗೂ ವಾರ್ತಾಪತ್ರಿಕೆಗಳು ಅಗ್ರಶ್ರೇಣಿ ಪಡೆದ ವಿದ್ಯಾರ್ಥಿಗಳ ಸಂದರ್ಶನವನ್ನು ಅವರ ಪೋಷಕರ ಸಂದರ್ಶನವನ್ನೂ ಸೇರಿಸಿ ಬಿತ್ತರಿಸುವ ಚಿರಪರಿಚಿತ ದೃಶ್ಯವನ್ನು ಎಲ್ಲರೂ ವೀಕ್ಷಿಸಿದರು. ಸಿಇಟಿಯಲ್ಲಿ ಉನ್ನತ ಸಾಧನೆ ಮಾಡಿದ ಹಲವರು ಇಷ್ಟರಲ್ಲಿಯೇ ಐಐಟಿ–ಜೆಇಇ ಫಲಿತಾಂಶಗಳನ್ನೂ ತಿಳಿದಿರುತ್ತಾರೆ ಹಾಗೂ ಯಾವುದಾದರೊಂದು ಐಐಟಿಯನ್ನು ಸೇರಿ ತಮ್ಮ ಶೈಕ್ಷಣಿಕ/ವೃತ್ತಿ ಭವಿಷ್ಯವನ್ನು ಉತ್ತಮಗೊಳಿಸಿಕೊಳ್ಳಲು ಕಾತರರಾಗಿರುತ್ತಾರೆ.

ಸಿಇಟಿ ಅಗ್ರಣಿಗಳ ಸಂದರ್ಶನಗಳಿಂದ ಕೆಲವು ಸಂಗತಿಗಳನ್ನು ತಿಳಿದುಕೊಳ್ಳಲು ಸಾಧ್ಯವಾಯಿತು. ತಮ್ಮ ಯಶಸ್ಸಿಗೆ ಕಳೆದ ಎರಡು ವರ್ಷದ ಅವಧಿಯಲ್ಲಿ ತಾವು ದಿನಕ್ಕೆ ಹತ್ತು–ಹನ್ನೆರಡು ತಾಸುಗಳ ಕಾಲ ತಮ್ಮ ಬೋರ್ಡ್ ಪರೀಕ್ಷೆಯ ಪಠ್ಯಭಾಗ ಹಾಗೂ ಕೋಚಿಂಗ್ ಕೇಂದ್ರಗಳು (ತರಬೇತಿ ಸಂಸ್ಥೆಗಳು) ಒದಗಿಸಿದ ಅಧ್ಯಯನ ಸಾಮಗ್ರಿಗಳೆರಡರನ್ನೂ ಮನನ ಮಾಡುವುದರ ಮೂಲಕ ನಡೆಸಿದ ಪರಿಶ್ರಮಪೂರ್ವಕ ಸಿದ್ಧತೆಯೇ ಕಾರಣವೆಂದು ಅವರು ಹೇಳುತ್ತಿದ್ದರು. ವಾಸ್ತವದಲ್ಲಿ, ಏಳನೆಯ ತರಗತಿಯಲ್ಲಿ ಇದ್ದಾಗಲೇ ಬುನಾದಿ ಮಟ್ಟದ

ಕೋರ್ಸ್‌ಗಳನ್ನು (ಫೌಂಡೇಷನ್ ಕೋರ್ಸ್) ತೆಗೆದುಕೊಳ್ಳುವುದರ ಮೂಲಕ ಐಐಟಿಯಲ್ಲಿ ದಾಖಲಾತಿ ಪಡೆಯುವುದಕ್ಕಾಗಿ ಕಷ್ಟಕರ ಓಟವನ್ನು ಅವರು ಸಾಕಷ್ಟು ಹಿಂದೆಯೇ ಆರಂಭಿಸಿದ್ದಿರಬೇಕು. ಈ ಅವಧಿಯುದ್ದಕ್ಕೂ ತಮ್ಮ ಮಕ್ಕಳ ಈ ಬೆನ್ನಟ್ಟುವಿಕೆಯ ಓಟದಲ್ಲಿ ಕನಿಷ್ಠ ಒಬ್ಬ ಪೋಷಕರಾದರೂ ಅವರಿಗೆ ಬೇಕಾದ ಕಾಳಜಿ, ಬೆಂಬಲವನ್ನು ನೀಡುವುದರ ಮೂಲಕ ಅಗಾಧವಾದ ತ್ಯಾಗವನ್ನು ಮಾಡಿರಲೇಬೇಕು.

ನನಗೆ ಕಳೆದ ಎರಡು ದಶಕಗಳಲ್ಲಿ ಐಐಟಿ–ಜೆಇಇ ಅಗ್ರಣಿಗಳಾಗಿದ್ದವರ ವೃತ್ತಿಗಳು ಯಾವ ರೀತಿಯಲ್ಲಿ ಬೆಳೆದಿವೆ ಎನ್ನುವುದನ್ನು ತಿಳಿಯುವ ಕುತೂಹಲವಿತ್ತು. ಹುಡುಕಾಟವು ಸ್ಪಷ್ಟವಾಗಿ ಮಧ್ಯಮವರ್ಗದ ಆಶೋತ್ತರಗಳ ಮೂಲಕ್ಕೇ ತಂದು ನಿಲ್ಲಿಸುತ್ತದೆ. ನನಗೆ ಸಂಗ್ರಹಿಸಲು ಸಾಧ್ಯವಾದ ಅಂಕಿ–ಅಂಶವು ಕಳೆದ ಎರಡು ದಶಕಗಳಿಗೆ, ಅಂದರೆ ಸುಮಾರು 1995 ರಿಂದ 2015ರವರೆಗಿನ ಅವಧಿಗೆ ಸಂಬಂಧಿಸಿದ್ದಾಗಿತ್ತು. ಇದು ಮುಖ್ಯವಾಗಿ ಅವರ ಐಐಟಿ ಶಿಕ್ಷಣವು ಮುಗಿದ ಮೇಲಿನ ಹಾಗೂ ನಂತರದ ಅವಧಿಯಲ್ಲಿ ವೃತ್ತಿಸಂಬಂಧಿ ಸ್ಥಾನಮಾನ, ಹುದ್ದೆಗಳನ್ನು ಕುರಿತಾಗಿತ್ತು. ದತ್ತಾಂಶದೆಡೆಗಿನ ಒಂದು ಕ್ಷಿಪ್ರನೋಟವು ಕೆಲವು ಕುತೂಹಲಕಾರಿ ಒಳನೋಟಗಳನ್ನು ನೀಡಿತು.

ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣದಲ್ಲಿ ಪ್ರಧಾನವಾಗಿ ಆಯ್ದುಕೊಂಡ ವಿಷಯ ಕಂಪ್ಯೂಟರ್ ವಿಜ್ಞಾನವಾಗಿತ್ತು. ಭೌತವಿಜ್ಞಾನ/ಗಣಿತದಂತಹ ಶುದ್ಧ ವಿಜ್ಞಾನ ವಿಷಯಗಳನ್ನು ಆಯ್ದುಕೊಂಡವರು ಕಡಿಮೆ ಸಂಖ್ಯೆಯಲ್ಲಿದ್ದರು. ಬಹುತೇಕ ಎಲ್ಲರೂ ಅಮೆರಿಕದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ/ ಡಾಕ್ಟೊರಲ್ ಶಿಕ್ಷಣವನ್ನು (ಸಂಶೋಧನಾಕಾರ್ಯ) ಮುಂದುವರೆಸಿದ್ದರು. ಉದ್ಯೋಗಕ್ಕೆ ಬಂದರೆ, ಅವರಲ್ಲಿ ಬಹಳಷ್ಟು ಜನರು ಪಾಶ್ಚಿಮಾತ್ಯ ವಿಶ್ವವಿದ್ಯಾಲಯಗಳಲ್ಲಿ ಬೋಧಕರಾಗಿ ಅಥವಾ ಟ್ವಿಟ್ಟರ್, ಅಮೆಝಾನ್, ಗೂಗಲ್ ಮುಂತಾದ ತಂತ್ರಜ್ಞಾನ ಸಂಸ್ಥೆಗಳಲ್ಲಿ ಅಥವಾ ಡಾಯ್ಚ್ ಬ್ಯಾಂಕ್(Deutsche Bank)ಗಳಂತಹ ಬಹುರಾಷ್ಟ್ರೀಯ ಹಣಕಾಸು ಸಂಸ್ಥೆಗಳಲ್ಲಿ ಸಂಶೋಧಕ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಕೆಲವರು ಉದ್ಯಮ ಮತ್ತು ಶೈಕ್ಷಣಿಕ ಕ್ಷೇತ್ರಗಳ ನಡುವೆ ವೃತ್ತಿ ಬದಲಿಸಿದ್ದಾರೆ. ಕೆಲವೇ ಕೆಲವರು ಹೊಸ ಉದ್ದಿಮೆಯ ಆರಂಭ, ನಾಗರಿಕ ಸೇವೆ ಅಥವಾ ಅಭಿವೃದ್ಧಿ ಕ್ಷೇತ್ರದಲ್ಲಿ ಕೆಲಸ ಮಾಡುವುದು ಇತ್ಯಾದಿ ಪರ್ಯಾಯ ಮಾರ್ಗಗಳನ್ನು ಅನುಸರಿಸಿ ನಡೆದಿದ್ದಾರೆ. ಐಐಟಿ ಅಗ್ರಣಿಗಳಲ್ಲಿ ಭಾರತದಲ್ಲಿ ಉಳಿದುಕೊಂಡವರು ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪ.

ಹಾಗಾದರೆ, ಮೇಲಿನ ವಿಶ್ಲೇಷಣೆಯಿಂದ ಏನನ್ನು ತೀರ್ಮಾನಿಸಬಹುದು? ಐಐಟಿ–ಜೆಇಇ ಅಗ್ರಣಿಯಾಗುವುದೆಂದರೆ, ಭಾರತದ ಅತ್ಯಂತ ಬುದ್ಧಿಮತ್ತೆಯಿರುವ ವಿದ್ಯಾರ್ಥಿಯೆಂದು ಅರ್ಥವೇ? ಜೆಇಇಯಲ್ಲಿ ಐವತ್ತು, ನೂರು ಅಥವಾ

ಐನೂರನೆಯ ಸ್ಥಾನ ಪಡೆದವರಲ್ಲಿ ಇರದಂತಹ ಏನೋ ಹೆಚ್ಚುವರಿಯಾದುದನ್ನು ಅಗ್ರಣಿಗಳು ಹೊಂದಿರುತ್ತಾರೆಯೇ? ಉತ್ತರವೆಂದರೆ, ಬುದ್ಧಿಮತ್ತೆ, ಪ್ರತಿಭೆಯನ್ನು ಹೊಂದಿರುವ ಗಣಿತ ಅಥವಾ ಖಗೋಳವಿಜ್ಞಾನದ ಒಲಂಪಿಯಾಡ್‌ಗಳಲ್ಲಿ ಅಪ್ರತಿಮ ಸಾಧನೆ ಮಾಡಿರುವ ಇನ್ನಿತರ ಯುವಜನರೂ ಇದ್ದಿರಬಹುದು. ಐಐಟಿಯಲ್ಲಿ ಅಗ್ರಸ್ಥಾನ ಪಡೆಯುವುದೆಂದರೆ ಅದು ಕಠಿಣ ಪರಿಶ್ರಮ ಮತ್ತು ಚತುರತೆಯ ಸಮ್ಮಿಶ್ರಣ. ಪರೀಕ್ಷೆಯ ಕಠಿಣತೆಯ ಮಟ್ಟ ಏನೇ ಇರಲಿ, ಪರೀಕ್ಷೆಯ ದಿನ ಅಭ್ಯರ್ಥಿಯ ಸಾಧನೆ ಹೇಗಿತ್ತು ಎನ್ನುವುದನ್ನೂ ಅದು ಅವಲಂಬಿಸಿರುತ್ತದೆ. ಒಟ್ಟಾರೆ ಸರಿಯಾದ ಸಿದ್ಧತೆ, ವಿಶೇಷ ಮಾರ್ಗದರ್ಶನಗಳು ಅಗತ್ಯವಾಗಿರುವುದರ ಜೊತೆಗೆ ಅದೃಷ್ಟವೂ ಅವರ ಪರವಾಗಿರಬೇಕಾಗುತ್ತದೆ. ವಾಸ್ತವದಲ್ಲಿ ವೃತ್ತಿಯಲ್ಲಿನ ಅವರ ಪ್ರಗತಿಯು ಕೇವಲ ಐಐಟಿಗಳಲ್ಲಿ ಅವರು ಏನನ್ನು ಕಲಿತರು ಹಾಗೂ ಒಳ್ಳೆಯ ಸಾಧನೆ ಮಾಡಿದರು ಎನ್ನುವುದಷ್ಟನ್ನೇ ಅಲ್ಲದೆ, ಅದರ ನಂತರ ಏನು ಮಾಡಿದರು, ಹೇಗೆ ಮಾಡಿದರು ಎನ್ನುವುದನ್ನೂ ಅವಲಂಬಿಸಿರುತ್ತದೆ.

1966ರಲ್ಲಿ ಅಗ್ರಸ್ಥಾನ ಪಡೆದ ಸುನೀಲ್ ಸಿಂಘಲ್ ಅವರು ಸಂಕ್ಷಿಪ್ತವಾಗಿ ಹೇಳಿದ ಹಾಗೆ–

> 'ಐಐಟಿಯು ಅಗ್ರಣಿಗಳಿಗಷ್ಟೇ ಅಲ್ಲ ಉಳಿದವರಿಗೂ ಕೂಡ ಕಲಿಸುವುದು ಕೇವಲ ಉನ್ನತ ಮಟ್ಟದ ಗಣಿತ ಅಥವಾ ಭೌತವಿಜ್ಞಾನವನ್ನಲ್ಲ. ಸಮಸ್ಯೆಗಳನ್ನು ಹೇಗೆ ಪರಿಹರಿಸುವುದು ಎಂಬುದನ್ನು, ಪ್ರತಿಯೊಂದು ಸಮಸ್ಯೆಯನ್ನೂ ಚಿಕ್ಕ ಚಿಕ್ಕ ಭಾಗಗಳಾಗಿ ವಿಭಜಿಸಿ, ಅವುಗಳನ್ನು ಒಂದೊಂದಾಗಿ ಹೇಗೆ ಪರಿಹರಿಸುವುದು ಎಂಬುದನ್ನು ಕೂಡ ಕಲಿಸುತ್ತದೆ. ನಾನು ಈಗ ಕೆಲಸ ಮಾಡುತ್ತಿರುವುದು ಇದೇ ರೀತಿಯಲ್ಲಿ. ಐಐಟಿ ಎಂದರೆ ಇದೇ. ಐಐಟಿಯಲ್ಲಿ ಯಶಸ್ಸು ಗಳಿಸಲು ವಿದ್ಯಾರ್ಥಿಗಳು ನಡೆಸುವ ಅದೇ ಸಿದ್ಧ ಮಾದರಿಯ ತಯಾರಿಯಿಂದಾಗಿ, ವಿದ್ಯಾರ್ಥಿಗಳ ಗುಣಮಟ್ಟವು ಕಡಿಮೆಯಾಗಿದೆ ಎಂಬುದನ್ನು ಒಪ್ಪುತ್ತಲೇ ಐಐಟಿ ಮದ್ರಾಸ್‌ನ ಮಾಜಿ ನಿರ್ದೇಶಕ ಎಮ್. ಎಸ್.ಅನಂತ್ ಅವರು, 'ನಾನು ಕೋಚಿಂಗ್ ಸೆಂಟರ್‌ಗಳ ಬೋಧಕರಿಂದ ತರಬೇತಿಗೊಳಗಾದ ಮನಸ್ಸುಗಳನ್ನಲ್ಲ, ಬದಲಿಗೆ ಇನ್ನೂ ಎರಕಗೊಂಡಿರದ, ತಾಜಾ ಬುದ್ಧಿಮತ್ತೆಯನ್ನುಳ್ಳ ವಿದ್ಯಾರ್ಥಿಗಳನ್ನು ಎದುರು ನೋಡುತ್ತಿದ್ದೇನೆ. ಕೇವಲ ಪ್ರಶ್ನೆ ಪತ್ರಿಕೆಗಳ ವಿನ್ಯಾಸವನ್ನು ಗುರುತಿಸುವ ಕೌಶಲವನ್ನು ಕರಗತ ಮಾಡಿಕೊಳ್ಳುವುದಕ್ಕಷ್ಟೇ ಕೋಚಿಂಗ್ ತರಗತಿಗಳು ವಿದ್ಯಾರ್ಥಿಗಳಿಗೆ ನೆರವಾಗುತ್ತವೆ. ಇದರಿಂದ ತಾಜಾ ಬುದ್ಧಿಮತ್ತೆಯನ್ನುಳ್ಳ ವಿದ್ಯಾರ್ಥಿಗಳು ಸಿಗುವುದಿಲ್ಲ' ಎಂದಿರುವುದು ವಿಪರ್ಯಾಸ.

ಮಕ್ಕಳನ್ನು ಬೆಳೆಸುವ ವಿಷಯದಲ್ಲಿ, ಮಧ್ಯಮವರ್ಗದ ಆಶೋತ್ತರದ ಗುರಿಯೆಂದರೆ ಪ್ರತಿಷ್ಠೆ, ಶ್ರೇಷ್ಠತೆಯ ಮುದ್ರೆ ಹಾಗೂ ಆರಾಮದಾಯಕ ಜೀವನ

ಶೈಲಿಯ ಭರವಸೆ ನೀಡುವ ಒಳ್ಳೆಯ ವೇತನದ ಉದ್ಯೋಗ. ಇವೆಲ್ಲವೂ ಐಐಟಿಯನ್ನು ಸೇರಿದರೆ ದೊರೆಯುವಂತಹವುಗಳು. ಅಗ್ರಣಿಗಳು ತಮ್ಮ ಕೆಲಸವು ಸದಾ ಸವಾಲಿನಿಂದ ಕೂಡಿದ್ದಾಗಿರಬೇಕೆಂದು ಸ್ಪಷ್ಟವಾಗಿ ಬಯಸುತ್ತಾರೆ ಹಾಗೂ ನಾಗರಿಕ ಸೇವೆಗಳಂತಹ ಉದ್ಯೋಗಗಳಲ್ಲಿ ಇರುವ ಸವಾಲುಗಳು ಅವರು ಇಷ್ಟಪಡುವಂತಹವುಗಳಲ್ಲ. ಅವರು ತಂತ್ರಜ್ಞಾನಕ್ಕೆ ಸಂಬಂಧಿಸಿದ ಉದ್ಯೋಗಗಳನ್ನೇ ಅದರಲ್ಲಿಯೂ ವಿಶೇಷವಾಗಿ ಪಾಶ್ಚಿಮಾತ್ಯ ದೇಶಗಳಲ್ಲಿ ಉದ್ಯೋಗಗಳನ್ನು ಆರಿಸಿಕೊಳ್ಳಲು ಇದೇ ಕಾರಣ. ಅವರಲ್ಲಿ ಬಹಳ ಜನರಿಗೆ, ಭಾರತದಲ್ಲಿ ಅನುಭವಿಸುವ ಅದೇ ಆರ್ಥಿಕ ಹಾಗೂ ಅಧಿಕಾರಶಾಹಿ ಸವಾಲುಗಳನ್ನು ಎದುರಿಸಬೇಕಾದ ಅಗತ್ಯ ಕೂಡ ಇಲ್ಲದಿರುವುದರಿಂದ ಪಾಶ್ಚಿಮಾತ್ಯ ದೇಶಗಳಲ್ಲಿ ನೆಲೆಗೊಳ್ಳುವುದು ಅನುಕೂಲಕರ ಆಯ್ಕೆಯಾಗಿಬಿಡುತ್ತದೆ.

ಅಗ್ರಣಿಗಳ ಸನ್ನಿವೇಶ ಇದಾದರೆ, ಅಗ್ರಣಿಗಳಲ್ಲದ ಇನ್ನಿತರ ಐಐಟಿ ಪದವೀಧರರ ವಿಷಯದಲ್ಲಿ ಏನಾಗಬಹುದು? ಅವರಿಗೆ ಸಂಸ್ಥೆಗಳಲ್ಲಿ ಅತ್ಯಂತ ಮೇಲುಸ್ತರದ ಉದ್ಯೋಗಗಳು ದೊರೆಯುವುದಿಲ್ಲ ಎನ್ನುವುದಂತೂ ನಿಶ್ಚಿತ. ಈ ಹಿನ್ನೆಲೆಯಲ್ಲಿ, ಅವರು ಅಗಾಧ ಪ್ರಮಾಣದ ಸಮಯ, ಶ್ರಮ ಹಾಗೂ ಮೊತ್ತವನ್ನು ತೆತ್ತು, ಭಾರಿ ಉದ್ಯೋಗದ ಬದಲಿಗೆ ಕೇವಲ ಒಳ್ಳೆಯದು ಎನ್ನಬಹುದಾದ ಉದ್ಯೋಗವನ್ನು ಒಪ್ಪಿಕೊಳ್ಳುವುದು ಎಷ್ಟರಮಟ್ಟಿಗೆ ಸಮರ್ಥನೀಯ? ಅಷ್ಟೊಂದು ದೀರ್ಘಕಾಲ ಇಂತಹ ಸ್ಪರ್ಧಾತ್ಮಕ ಪರಿಸರದಲ್ಲಿ ಇದ್ದು ಹೊರಬರುವ ಅವರು ಎಂತಹ ಮೌಲ್ಯವ್ಯವಸ್ಥೆಯನ್ನು ಹೊಂದಿದವರಾಗಿರುತ್ತಾರೆ? ಉದಾಹರಣೆಗೆ, ತಮ್ಮ ಆರಾಮದಾಯಕ ಸೌಕರ್ಯಗಳನ್ನು ತ್ಯಜಿಸದೆ ಅವರು ತಮ್ಮ ಸುತ್ತಲೂ ಇರುವ ಅಷ್ಟೇನೂ ಅದೃಷ್ಟವಂತರಲ್ಲದ ಜನರ ಕುರಿತು ಸೂಕ್ಷ್ಮ ಸಂವೇದನೆಯನ್ನು ಬೆಳೆಸಿಕೊಂಡಾರೆಯೇ? ಐಐಟಿಗಳು ಹಾಗೂ ಅವುಗಳಲ್ಲಿನ ವಿದ್ಯಾರ್ಥಿಗಳಿಗೆ ಕೊಟ್ಟ ಗೌರವಕ್ಕೆ ಪ್ರತಿಯಾಗಿ ಭಾರತೀಯರ ಬದುಕನ್ನು ಸುಧಾರಿಸುವ ಬಯಕೆಯನ್ನು ಹೊಂದಿರುವ ಪ್ರತಿಭಾವಂತರು ಸಾಕಷ್ಟು ಜನ ಇದ್ದಾರೆಯೇ? ಆ ದಿಸೆಯಲ್ಲಿ ಕೆಲಸ ಮಾಡಲು ಅಗತ್ಯವಾದ ಸೂಕ್ತ ತಿಳುವಳಿಕೆ, ಮಾರ್ಗದರ್ಶನ, ತರಬೇತಿಗಳನ್ನು ಹಾಗೂ ಅವಕಾಶಗಳನ್ನು ವ್ಯವಸ್ಥೆಯು ಅವರಿಗೆ ಒದಗಿಸುವುದೇ?

ವ್ಯಕ್ತಿಗತ ಆಶೋತ್ತರಗಳು ವಿಶಾಲ ಸಮಾಜದ ಗೊತ್ತುಗುರಿಗಳೊಡನೆ ಒಂದಾಗಿ ಬೆಳೆಯಬೇಕು ಎನ್ನುವುದು ಮಿತಿಮೀರಿದ ನಿರೀಕ್ಷೆಯೇನಲ್ಲ. ಪರಸ್ಪರ ವಿರುದ್ಧವಾಗಿರುವಂತೆ ತೋರುವ ಈ ಎರಡೂ ಉದ್ದೇಶಗಳನ್ನು ತಾವು ಪ್ರೋತ್ಸಾಹಿಸಲು ಸಾಧ್ಯವೇ ಎಂದು ಪರ್ಯಾಲೋಚಿಸಲು ಐಐಟಿಗಳಂತಹ ಸರ್ವಶ್ರೇಷ್ಠ ಸಂಸ್ಥೆಗಳಿಗೆ ಬಹುಶಃ ಇದು ಸಕಾಲ.

■

ಬಿ ಫಸ್ಟ್, 13–06–2018



1ನೇ ಫೆಬ್ರವರಿ 2017– ಇದು ಅತ್ಯಂತ ಆಪ್ಯಾಯಮಾನ ಕ್ಷಣಗಳಲ್ಲೊಂದು. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ವಿರುದ್ಧದ ಪಂದ್ಯದಲ್ಲಿ ಬೌಲಿಂಗ್ ಮಾಡುತ್ತಿರುವುದು. ದಶಕಗಳ ಕ್ರಿಕೆಟ್ ಆಟ ದೇಹ–ಮನಸ್ಸುಗಳನ್ನು ಉಲ್ಲಾಸದಾಯಕವಾಗಿಸಿದೆಯಲ್ಲದೆ ನೂರಾರು ಸ್ನೇಹಿತರನ್ನು ಕೊಟ್ಟಿದೆ.